ಹಿಂದಿ ಮೂಲ: ಪ್ರೇಮ್‌ಚಂದ್
**ಕನ್ನಡಕ್ಕೆ: ಕೆ. ಶಾಂತಾಮಣಿ**

ವೃದ್ಧಾಪ್ಯ ಬಹಳಷ್ಟು ಬಾಲ್ಯದ ಪುನರಾಗಮನವೇ ಸರಿ. ಮುದಿಚಿಕ್ಕಮ್ಮನಿಗೆ ನಾಲಿಗೆ ರುಚಿಯನ್ನು ಬಿಟ್ಟು ಇನ್ನು ಯಾವ ಯಾವ ಚಪಲವೂ ಇರಲಿಲ್ಲ. ತನ್ನ ಕಷ್ಟಗಳ ಕಡೆಗೆ ಬೇರೆಯವರ ಗಮನ ಸೆಳೆಯಲು ಅಳುವುದನ್ನು ಬಿಟ್ಟು ಇನ್ನು ಯಾವ ಆಧಾರವೂ ಇರಲಿಲ್ಲ. ಎಲ್ಲ ಇಂದ್ರಿಯಗಳು, ಕಣ್ಣು, ಕೈ, ಕಾಲು ಎಲ್ಲವೂ ಶಕ್ತಿಗುಂದಿದ್ದವು. ನೆಲದ ಮೇಲೆ ಬಿದ್ದುಕೊಂಡಿರುತ್ತಿದ್ದಳು. ಮನೆಯವರು ಅವಳ ಆಸೆಯನ್ನು ಪೂರೈಸದಿದ್ದರೆ, ಊಟದ ಸಮಯ ಮೀರಿ ಹೋದರೆ, ಪೇಟೆಯಿಂದ ತಂದ ಪದಾರ್ಥ ಅವಳಿಗೆ ದೊರಕದಿದ್ದರೆ, ಎದೆ ಬಡಿದುಕೊಂಡು ಅಳುತ್ತಿದ್ದಳು.

ಅವಳ ಗಂಡ ತಾರುಣ್ಯದಲ್ಲೇ ಸತ್ತು ಹೋಗಿದ್ದರು. ಅಣ್ಣನ ಮಗನನ್ನು ಬಿಟ್ಟರೆ ಅವಳಿಗೆ ಇನ್ಯಾರೂ ಇರಲಿಲ್ಲ. ಆ ಅಣ್ಣನ ಮಗನ ಹೆಸರಿಗೇ ಎಲ್ಲ ಆಸ್ತಿಯನ್ನು ಬರೆದಿದ್ದಳು. ಅಣ್ಣನ ಮಗ, ಆಸ್ತಿಯನ್ನು ಬರೆಸಿಕೊಳ್ಳುವಾಗ ದಳ್ಳಾಳಿ ಕೊಡುವ ಹಾಗೆ ಸುಳ್ಳು ಭರವಸೆ ಕೊಟ್ಟಿದ್ದ. ಆಕೆಯ ಆಸ್ತಿಯಿಂದ ವರ್ಷಕ್ಕೆ ನೂರೈವತ್ತು ಇನ್ನೂರು ರೂಪಾಯಿಗಳಷ್ಟು ಆದಾಯವಿದ್ದರೂ ಅವಳಿಗೆ ಹೊಟ್ಟೆ ಭರ್ತಿ ಊಟ ಕೂಡ ಸಿಗುತ್ತಿರಲಿಲ್ಲ. ಇದರಲ್ಲಿ ಅವಳ ಅಣ್ಣನ ಮಗ ಪಂಡಿತ ಬುದ್ಧಿರಾಮನ ತಪ್ಪೋ ಅಥವಾ ಅವಳ ಹೆಂಡತಿ ರೂಪಳ ತಪ್ಪೋ ಹೇಳುವುದಕ್ಕಾಗುತ್ತಿರಲಿಲ್ಲ. ಎಲ್ಲಿವರೆಗೆ ಅವನ ಜೇಬಿನಿಂದ ಹಣ ಖರ್ಚಾಗುತ್ತಿರಲಿಲ್ಲವೋ ಅಲ್ಲಿಯವರೆಗೆ ಬುದ್ಧಿರಾಮ ಒಳ್ಳೆಯ ಮನುಷ್ಯನಾಗಿರುತ್ತಿದ್ದ. ರೂಪ ಸ್ವಭಾವದಲ್ಲಿ ಕಟುವಾದರೂ ಭಗವಂತನಿಗೆ ಹೆದರುತ್ತಿದ್ದಳು. ಆದ್ದರಿಂದ ಆ ಮುದಿಚಿಕ್ಕಮ್ಮನಿಗೆ ಬುದ್ಧಿರಾಮನ ಒಳ್ಳೆಯತನಕ್ಕಿಂತ ರೂಪಳ ಕಟು ಸ್ವಭಾವವೇ ವಾಸಿ ಎನಿಸುತಿತ್ತು.

ಬುದ್ಧಿರಾಮನಿಗೂ ತಾನು ಮಾಡುತ್ತಿರುವುದು ತಪ್ಪು ಎನಿಸುತ್ತಿತ್ತು. ಈಕೆಯ ಆಸ್ತಿಯಿಂದ ತಾನು ಗೌರವಸ್ಥನಾಗಿದ್ದೇನೆಂದು ಅವನಿಗೆ ಗೊತ್ತಿತ್ತು. ಒಂದು ವೇಳೆ ಬಾಯಿ ಉಪಚಾರ, ಒಣ ಸಹಾನುಭೂತಿಯಿಂದ ಆಕೆಯ ಸ್ಥಿತಿ ಸುಧಾರಿಸುವುದಾಗಿದ್ದರೆ ಅವನ ಅಭ್ಯಂತರವೇನೂ ಇರಲಿಲ್ಲ. ಆದರೆ ವಿಶೇಷ ಖರ್ಚಿನ ಭಯದಿಂದ ಅವನು ಏನನ್ನೂ ಕಾರ್ಯರೂಪಕ್ಕೆ ತರಲಾಗದವನಾಗಿದ್ದ. ಯಾರಾದರೂ ಗೌರವಸ್ಥರು ಮನೆಗೆ ಬಂದಾಗ ಈ ಮುದಿಚಿಕ್ಕಮ್ಮ ಗೊಣಗಲಾರಂಭಿಸಿದರೆ ಕೋಪದಿಂದ ಮನೆಯೊಳಗೆ ಬಂದು ಚೆನ್ನಾಗಿ ಬಯ್ಯುತ್ತಿದ್ದನು. ಸಾಮಾನ್ಯವಾಗಿ ಮಕ್ಕಳಿಗೆ ಮುದುಕರ ಸ್ವಭಾವ ಹಿಡಿಸುವುದೇ ಇಲ್ಲ. ಅದರ ಜೊತೆಗೆ ತಂದೆ ತಾಯಿಗಳ ವ್ಯವಹಾರ ಕಂಡ ಕೂಡಲೇ ಮುದುಕಿಯನ್ನು ಇನ್ನಷ್ಟು ಸತಾಯಿಸುತ್ತಿದ್ದರು. ಒಬ್ಬ ರೇಗಿಸಿ ಹೋದರೆ ಮತ್ತೊಬ್ಬ ಬಾಯಲ್ಲಿ ನೀರು ತುಂಬಿಕೊಂಡು ಉಗುಳಿ ಹೋಗುತ್ತಿದ್ದ. ಚಿಕ್ಕಮ್ಮ ಹೋ ಎಂದು ಅಳಲಾರಂಭಿಸುತ್ತಿದ್ದಳು. ಆದರೆ ಅವಳು ತಿನ್ನುವುದಕ್ಕೆ ಅಳುತ್ತಾಳೆಂದು ತಿಳಿಯುತ್ತಿದ್ದರು. ಯಾರೂ ಅವಳ ಆರ್ತನಾದದ ಬಗ್ಗೆ ಗಮನ ಕೊಡುತ್ತಿರಲಿಲ್ಲ. ಚಿಕ್ಕಮ್ಮ ಕೋಪದಿಂದ ಮಕ್ಕಳನ್ನು ಬೈಯ್ಯಲಾರಂಭಿಸಿದಾಗ ರೂಪ ಓಡಿ ಬರುತ್ತಿದ್ದಳು. ಈ ಭಯದಿಂದ